**"ಶಾಲೆಗಳಲ್ಲಿ ಮನೋದೈಹಿಕ ದಂಡನೆಯನ್ನು (Corporal Punishment) ತೊಡೆದು ಹಾಕಲು ಶಿಕ್ಷಕರು ಅನುಸರಿಸಿದ ಉತ್ತಮ ಘಟನೆಗಳನ್ನು (Best Practices) ಇತರ ಶಿಕ್ಷಕರಿಗೆ ಅನುಸರಿಸವಂತಾಗಲು ದಾಖಲೀಕರಣಕ್ಕಾಗಿ"**

ಮಕ್ಕಳ ಶಿಕ್ಷಣವು ಒಂದು ಮೂಲಭೂತ ಹಕ್ಕಾಗಿರುವ ಸಂದರ್ಭದಲ್ಲಿ ವ್ಯವಸ್ಥೆಗಳು ಮಕ್ಕಳ ಶಿಕ್ಷಣಕ್ಕೆ ಪೂರಕವಾಗುವಂತೆ ಮಾಡುವುದು ಮತ್ತು ಮಕ್ಕಳು ವಿನೋದಮಯ ವಾತವರಣದಲ್ಲಿ ತಮ್ಮ ಬಾಲ್ಯದ ಶಿಕ್ಷಣವನ್ನು ಪಡೆಯುವಂತೆ ಮಾಡುವ ಉದ್ದೇಶದಿಂದ ಶಿಕ್ಷಾ ರಹಿತ ಕಲಿಕೆಗೆ ನಮ್ಮ ಶಾಲೆಗಳನ್ನು ಪರಿವರ್ತಿಸುವುದು ಇಂದಿನ ಅನಿವಾರ್ಯತೆಯಾಗಿದೆ ಆದರೆ, ಮಕ್ಕಳ ದುರ್ವರ್ತನೆಗಳನ್ನು ಶಿಕ್ಷೆಗಳಿಂದ ನಿಯಂತ್ರಿಸುವುದು ತಲೆ ತಲಾಂತರಗಳಿಂದ ರೂಢಿಯಾಗಿ ಬಂದಿರುವುದರಿಂದ ಇದನ್ನು ಅನುಷ್ಠಾನಕ್ಕೆ ತರುವುದು ಅಷ್ಟು ಸುಲಭ ಸಾಧ್ಯವಲ್ಲ. ಆದರೆ ಈ ಪದ್ದತಿಯಿಂದ ಮಕ್ಕಳೂ ಮಾನಸಿಕವಾಗಿ ತೀವ್ರ ಯಾತನೆ ಅನುಭವಿಸುವುದಲ್ಲದೆ ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುವ ಜತೆಗೆ ನಂತರದ ಕ್ರೌರ್ಯಗಳಿಗೆ ಕಾರಣವಾಗುತ್ತಿದೆ ಎಂಬುದನ್ನು ಅನೇಕ ಅಧ್ಯಯನಗಳು ದೃಡೀಕರಿಸಿವೆ. ಅದ್ದರಿಂದ ಶಿಕ್ಷಾ ರಹಿತ ಬೋಧನೆಗೆ ಶಾಲೆಗಳು ಮತ್ತು ಶಿಕ್ಷಕರು ಬದಲಾಗಬೇಕಾಗಿದೆ.

ಬಾಲ ಮನೋವಿಜ್ಞಾನದ ಮೂಲ ಜ್ಞಾನದೊಂದಿಗೆ ಉತ್ತಮ ಅಭ್ಯಾಸವನ್ನು ರೂಡಿಸಿಕೊಂಡು ಶಿಕ್ಷೆಯನ್ನು ನೀಡದೆ ಮಕ್ಕಳ ದುರ್ವರ್ತನೆಗಳನ್ನು ತಿದ್ದಿ ಕಲಿಸುತ್ತಿರುವ ಅನೇಕ ಶಿಕ್ಷಕರು ನಮ್ಮಲ್ಲಿ ಇದ್ದಾರೆ ಮತ್ತು ಇಂದಿಗೂ ಅವರು ಆದರ್ಶ ಶಿಕ್ಷಕರಾಗಿ ಎಲೆಮರೆಯ ಕಾಯಿಯಂತೆ ಇದ್ದಾರೆ. ಅದ್ದರಿಂದ ಅವರು ಅನುಸರಿಸುತ್ತಿರುವ ಭೋದನಾ ವಿಧಾನವನ್ನು ಇತರ ಶಿಕ್ಷಕರು ಪಾಲಿಸುವಂತೆ ಮಾಡಲು ಮತ್ತು ಅದನ್ನು ದಾಖಲಿಕರಣ ಮಾಡುವ ಉದ್ದೇಶದಿಂದ ಶಿಕ್ಷಕರು ಶಿಕ್ಷಾ ರಹಿತ ಬೋಧನೆ ಮಾಡಿರುವ ಅಥವಾ ಮಕ್ಕಳ ಮನೋಭಾವವನ್ನು ಬದಲಿಸಿರುವಂತಹ ಉತ್ತಮ ಘಟನೆಗಳನ್ನು (Best practice) ಪಡಿ ಸಂಸ್ಥೆಗೆ ಕಳುಹಿಸಿಕೊಡುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ಬಂದಂತಹ ಉತ್ತಮ ಘಟನೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು.

**ಗಮನಿಸಬೇಕಾದ ಅಂಶಗಳು**

ನಡವಳಿಕೆಗೆ ಸಂಬಂದಿಸಿದಂತೆ, ಶಿಸ್ತು ಉಲ್ಲಂಘನೆ, ಕಲಿಕೆಯಲ್ಲಿ ನಿರುತ್ಸಾಹಗೊಂಡ ಮಕ್ಕಳನ್ನು ಯಾವುದೇ ದಂಡನೆಗೆ ಒಳಪಡಿಸದೆ ಶಿಕ್ಷಕರು ತಮ್ಮದೇ ಆದ ಸಕಾರಾತ್ಮಕ ವಿಧಾನಗಳಿಂದ ಮಕ್ಕಳನ್ನು ತಿದ್ದಿ ಯಶಸ್ವಿಯಾದ ಘಟನೆಗಳನ್ನೊಂಡಿರಬೇಕು.

ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬಹುದು.

ಪಡಿ
"ಗಣೇಶ್" 2ನೇ ಅಡ್ಡ ರಸ್ತೆ,
ಕೊಲಾಸೂ ಅಸ್ಪತ್ರೆಯ ಬಳಿ
ಲೊವರ್ ಬೆಂದೂರ್
ಕಂಕನಾಡಿ ಮಂಗಳೂರು–02
ದೂರವಾಣಿ–0824–2439895
e-mail:valored@gmail.com